**ದಿಃ24.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಪಿ ಬಿ ವಕೀಲರಿಂದಃ**

1. ನಿಪಿ 12 ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುವ ಮೊದಲು ನನ್ನ ಬಳಿಯೆ ಇತ್ತು. ನಿಪಿ 12 ದಾಖಲೆಯನ್ನು ಈ ದಾವೆ ಸಲ್ಲಿಸುವ ಸಮಯದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ 12 ನಕಾಶೆಯಲ್ಲಿ ಯಾವ ದಿನದಂದು ಸರ್ವೆ ಮಾಡಿರುವುದು ಎಂದು ತಿಳಿಸಿರುವುದಿಲ್ಲ ಎಂದರೆ ಸರಿ. ನಿಪಿ 12 ನಕಾಶೆಯಲ್ಲಿ ಒ ಎಸ್ ನಂಃ67/2016 ದಾವೆಯ ಪ್ರತಿವಾದಿಗಳು 60 ಸೆಂಟು ಆಸ್ತಿಯನ್ನು ಒತ್ತುವರಿ ಮಾಡಿರುವ ಬಗ್ಗೆ ಇರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು, 50 ಸೆಂಟು ಒತ್ತುವರಿ ಮಾಡಿರುವ ಬಗ್ಗೆ ಇದೆ

ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ದಾಖಲಿಸುವ ಸಮಯದಲ್ಲಿ ನಿಪಿ 12 ನಕಾಶೆ ನನ್ನ ಬಳಿ ಇದ್ದರೂ ಕೂಡ ಪ್ರತಿವಾದಿಯವರು 60 ಸೆಂಟು ಒತ್ತುವರಿ ಮಾಡಿರುತ್ತಾರೆ ಎಂದು ತಿಳಿಸಲು ಏನಾದರೂ ವಿಶೇಷವಾದ ಕಾರಣ ಇತ್ತೊ ಎನ್ನುವ ಪ್ರಶ್ನೆಗೆ ಸಾಕ್ಷಿಯು, ಕೈ ತಪ್ಪಿನಿಂದ 60 ಸೆಂಟು ಎಂದು ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 12 ನಕಾಶೆಯನ್ನು ಈ ದಾವೆ ಸಲ್ಲಿಸುವಾಗ ನಮ್ಮ ವಕೀಲರಿಗೆ ತೋರಿಸಿರುತ್ತೇನೋ ಇಲ್ಲವೊ ಎಂದು ಈಗ ಹೇಳಲು ನೆನಪಿಲ್ಲ.

2. ಸಾಮಾನ್ಯವಾಗಿ ಯಾವುದಾದರೂ ಆಸ್ತಿಗೆ ಸಂಬಂಧಿಸಿದಂತೆ ಸರ್ವೆ ಮಾಡಬೇಕಾದರೆ ತಹಶೀಲ್ದಾರ್ ರವರಿಗೆ ಅರ್ಜಿಯನ್ನು ನೀಡಬೇಕಾಗುತ್ತದೆ ಎಂದರೆ ಸರಿ. ತಹಶೀಲ್ದಾರ್ ರವರು ನಂತರದಲ್ಲಿ ಸರ್ವೆ ಇಲಾಖೆಗೆ ಅರ್ಜಿಯನ್ನು ಕಳುಹಿಸುತ್ತಾರೆ ಎಂದರೆ ಸರಿ. ನಿಪಿ 12 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಎಂದು ಇದೆ ಎಂದರೆ ಸರಿ. ಒತ್ತುವರಿ ಆಗಿದ್ದ ಕಾರಣದಿಂದ ನಾನು ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ನೀಡಿರುತ್ತೇನೆ. ನಮಗೆ ಸಂಬಂಧಿಸಿದ ಜಾಗ ಒತ್ತುವರಿ ಆಗಿದ್ದ ವಿಷಯ ನನಗೆ ಗೊತ್ತಿದ್ದರಿಂದ ನಾನು ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ನೀಡಿರುತ್ತೇನೆ. ನಿಪಿ 12 ನಕಾಶೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್ ರವರು ಹೊರಡಿಸಿರುವ ಆದೇಶದ ದಿನಾಂಕ ಇರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು, ಅದು ಸರ್ವೆ ಇಲಾಖೆಯವರಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ.

3. ನಿಪಿ 12 ನಕಾಶೆಯಲ್ಲಿ ತೋರಿಸಿರುವ ಸರ್ವೆ ನಂ:37/3 ರ ಪಶ್ಚಿಮ ದಿಕ್ಕಿನಲ್ಲಿ ಬಣ್ಣ ಹಾಕದ ಜಾಗ ಸರ್ವೆ ನಂ:37/2 ಆಗಿರುತ್ತದೆ. ಸದರಿ ಬಣ್ಣ ಹಾಕದ ಜಾಗ ನನ್ನ ಸ್ವಾಧೀನದಲ್ಲಿ ಇದೆ. ನಿಪಿ 12 ನಕಾಶೆಯಲ್ಲಿ 1, 2, 3 ಎಂದು ರೋಮನ್ ಸಂಖ್ಯೆಯಲ್ಲಿ ತಿಳಿಸಿರುವ ಸ್ವತ್ತಿನ ಪೂರ್ವಕ್ಕೆ ಉತ್ತರ-ದಕ್ಷಿಣವಾಗಿ ನೆಲಜಿಯಿಂದ ಪೇರೂರಿಗೆ ಹೋಗುವ ರಸ್ತೆ ಇದೆ. ಸದರಿ ರಸ್ತೆಯ ಪೂರ್ವ ದಿಕ್ಕಿಗೂ ಸರ್ವೆ ನಂ.37/2 ಸ್ವತ್ತು ಇದೆ. ಪೂರ್ವ ದಿಕ್ಕಿನಲ್ಲಿರುವ ಸರ್ವೆ ನಂ:37/2 ಸ್ವತ್ತಿಗೆ ಸೇರಿದಂತೆ 2 ಎಕರೆ ಇದೆ. ಮೇಲೆ ನಾನು ಹೇಳಿದಂತಹ ರಸ್ತೆ ಸರ್ವೆ ನಂ:37/2 ರಲ್ಲಿ ಹಾದುಹೋಗುತ್ತದೆ. ಸರ್ವೆ ನಂ:37/2 ರಲ್ಲಿ ರಸ್ತೆಗಾಗಿ ಅಂದಾಜು 300 ಮೀಟರ್ ಉದ್ದ ಮತ್ತು 15 ಅಡಿ ಅಗಲ ಹೋಗಿರುತ್ತದೆ. ನಿಪಿ 12 ನಕಾಶೆಯಲ್ಲಿ ರಸ್ತೆ ಮತ್ತು ರಸ್ತೆಯ ಪೂರ್ವಕ್ಕೆ ಇರುವ ಜಾಗದ ಸರ್ವೆ ನಂಬರ್

ತಿಳಿಸಿರುವುದಿಲ್ಲ ಎಂದರೆ ಸರಿ.

4. ನಿಪಿ 12 ನಕಾಶೆಯ ಪ್ರಕಾರ ಸರ್ವೆ ನಂ.37/3 ರ ದಕ್ಷಿಣಕ್ಕೆ ಮತ್ತು ಪೂರ್ವ ದಿಕ್ಕಿನಲ್ಲಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ನೆಲಜಿ-ಪೇರೂರು ರಸ್ತೆಯಾಗಿರುತ್ತದೆ. ಸದರಿ ರಸ್ತೆ ಸರ್ವೆ ನಂ.37/3 ರಲ್ಲಿ ಹಾದುಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆ ಸುಮಾರು 100 ಮೀಟರ್ ಉದ್ದ ಮತ್ತು 15 ಅಡಿ ಅಗಲ ಆಗಿರಬಹುದು. ಸದರಿ ರಸ್ತೆಯ ಪೂರ್ವ ದಿಕ್ಕಿನಲ್ಲಿ ನಮಗೆ ಸೇರಿದ ಯಾವುದೆ ಸ್ವತ್ತು ಇರುವುದಿಲ್ಲ. ಸದರಿ ರಸ್ತೆ ಸರ್ವೆ ನಂ.37/3 ರಲ್ಲಿ ಇದೆ ಎಂದು ನಿಪಿ 12 ರಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು, ಆ ಸಮಯದಲ್ಲಿ ಸರ್ವೆ ನಂ:37/3 ಸ್ವತ್ತನ್ನು ಸರ್ವೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 12 ರಂತೆ ಸರ್ವೆ ಮಾಡುವಾಗ ಕುನ ನಂಬರ್ ಇರಲಿಲ್ಲ ಎಂದರೆ ಸಾಕ್ಷಿಯು ಕೆಲವು ಕುನ ನಂಬರ್ ಇತ್ತು ಎಂದು ನುಡಿಯುತ್ತಾರೆ.

5. ಸರ್ವೆ ನಂ.37/2 ಮತ್ತು 37/3 ರ ಹದ್ದುಬಸ್ತಿನ ಸರ್ವೆ ನಂಬರ್ ನ ಆರ್ ಟಿ ಸಿ ಗಳನ್ನು ಸರ್ವೆಯರ್ ಗಳಿಗೆ ನಾನು ಕೊಟ್ಟಿರುತ್ತೇನೆ. ನಿಪಿ 12 ರಲ್ಲಿ ಯಾರು ಒತ್ತುವರಿ ಮಾಡಿರುತ್ತಾರೆ ಎಂದು ಹೆಸರನ್ನು ತೋರಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು, ಒತ್ತುವರಿ ಮಾಡಿರುವ ಸರ್ವೆ ನಂಬರ್ ನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 12 ರ ಪ್ರಕಾರ ಯಾವುದೆ ಸರ್ವೆಯಾಗಿರುವುದಿಲ್ಲ ಎಂದರೆ ಸುಳ್ಳು. ನಿಪಿ 12 ವಾಸ್ತವ ಅಂಶಗಳನ್ನು ತೋರಿಸುವುದಿಲ್ಲ ಎಂದರೆ ಸುಳ್ಳು.

6. ನಿಡಿ 8 ರಂತೆ ಸರ್ವೆ ನಂಬರ್ 37/3 ರ 2.88 ಎಕರೆ ಜಾಗವನ್ನು ನೆಲಜಿ ಕೃಷಿ ಸಹಕಾರ ಸಂಘಕ್ಕೆ ಆಧಾರವಾಗಿಟ್ಟು ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿಪಿ 12 ರಲ್ಲಿ ಸರ್ವೆ ನಂ.37/3 ಒತ್ತುವರಿಯಾಗಿರುವ ಬಗ್ಗೆ ಕಾಣಿಸಿರುವುದಿಲ್ಲ, ಆದರೆ ಸರ್ವೆ ನಂ:37/2 ಒತ್ತುವರಿಯಾಗಿರುತ್ತದೆ. ನಿಪಿ 12 ರಲ್ಲಿ ಸರ್ವೆ ನಂಬರ್ 37/3 ರ ಪೂರ್ತಿ ವಿಸ್ತೀರ್ಣವನ್ನು ಸರ್ವೆ ನಂ:37/2 ರವರು ಒತ್ತುವರಿಮಾಡಿರುತ್ತಾರೆ ಎಂದು ಇದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 12 ಪ್ರತಿವಾದಿಯವರಿಗೆ ಗೊತ್ತಿಲ್ಲದ ಹಾಗೆ ನಾನು ಸರ್ವೆ ಇಲಾಖೆ ಮತ್ತು ಕಂದಾಯ ಇಲಾಖೆಯವರ ಮೇಲೆ ಪ್ರಭಾವ ಬೀರಿ ಮಾಡಿರುವಂತಹ ದಾಖಲೆಯಾಗಿರುತ್ತದೆ ಎಂದರೆ ಸುಳ್ಳು. ನಾನು ಸಿಬಿಐ ಅಲ್ಲಿ ಕೆಲಸ ಮಾಡುತ್ತಿದ್ದೇನೆ

ಎಂದು ಬೆದರಿಸಿ ನಿಪಿ 12 ದಾಖಲೆಯನ್ನು ಮಾಡಿಕೊಂಡಿರುತ್ತೇನೆ ಎಂದರೆ ಸುಳ್ಳು.

7. ನಿಪಿ 13 ರಲ್ಲಿ 9ನೇ ಕಾಲಂ ಇರುವುದಿಲ್ಲ ಎಂದರೆ ಸಾಕ್ಷಿಯು, ದೃಢೀಕೃತ ನಕಲನ್ನು ನನಗೆ ಕೊಡುವಾಗ ಹಾಗೆ ಇತ್ತು ಎಂದು ನುಡಿಯುತ್ತಾರೆ. ನಿಪಿ 13 ಕಾಲಂ 4 ರಲ್ಲಿ ತೋರಿಸಿರುವ ಕೈಯಂದೀರ ಅಪ್ಪಯ್ಯ ಎಂದರೆ ಅಯ್ಯಪ್ಪರವರ ಮಗ, ಸದರಿಯವರು ಮತ್ತು ನನ್ನ ತಂದೆ ಅಣ್ಣ-ತಮ್ಮಂದಿರ ಮಕ್ಕಳು ಆಗಿರುತ್ತಾರೆ. ಅಯ್ಯಪ್ಪ, ಕಾಳಯ್ಯ ಮತ್ತು ದೇವಯ್ಯರವರು ದಾಯಾದಿಗಳು ಆಗಿರುತ್ತಾರೆ. ನಿಪಿ 13 ರಲ್ಲಿ ನನಗಾಗಲಿ ಅಥವಾ ನನ್ನ ತಂದೆಗಾಗಲಿ ದಾವಾ ಷೆಡ್ಯೂಲ್ ಸ್ವತ್ತು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯು 1904 ಇಸವಿಯ ದಾಖಲೆ ಆಗಿದ್ದು, ನನ್ನ ಅಜ್ಜನಾದ ದೇವಯ್ಯರವರ ಹೆಸರು ಇದೆ ಎಂದು ನುಡಿಯುತ್ತಾರೆ. ನಿಪಿ 13 ದಾಖಲೆಯನ್ನು ನಾನು ಈ ದಾವೆಯ ಸಲುವಾಗಿ ಸೃಷ್ಟಿಸಿರುವಂತಹ ದಾಖಲೆಯಾಗಿರುತ್ತದೆ ಎಂದರೆ ಸುಳ್ಳು. ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.